ವೈಭೋಗದ ಮದುವೆಗಳು ಶ್ರೀಮಂತರಿಗಷ್ಟೇ ಸೀಮಿತ; ಮಧ್ಯಮ ಹಾಗೂ ಕೆಳಮಧ್ಯಮದ ಮಂದಿಗೆ ಗಗನಕುಸುಮ ಎಂಬ ಮಾತು ಈಗ ಹಳಸಲು. ಅದ್ದೂರಿತನದ ವ್ಯಾಮೋಹ ಮೇಲ್ಮಧ್ಯಮ ವರ್ಗದವರ ಮನದ ಹೊಸ್ತಿಲು ದಾಟಿ ಬಂದಾಗಿದೆ. ಮದುವೆ ಈಗ ಬರೀ ಶಾಸ್ತ್ರವಾಗಿ ಉಳಿದಿಲ್ಲ. ಅದು ನಮ್ಮನ್ನು ನಾವು ಬಿಂಬಿಸಿಕೊಳ್ಳುವ ಸಂದರ್ಭವಾಗಿಯೂ ಬದಲಾಗಿದೆ. ಹಾಗಾಗಿ 'ಮದುವೆ ಮಾಡಿ ನೋಡು' ಎಂಬ ಮಾತನ್ನು 'ಎಲ್ಲರೂ ಬೆಕ್ಕಸಗೊಳ್ಳುವ ಹಾಗೆ ಮದುವೆ ಮಾಡು' ಎಂದು ಬದಲಾಯಿಸಿಕೊಳ್ಳಲಡ್ಡಿಯಿಲ್ಲ. ಹೀಗಿರುವಾಗ ಅದ್ದೂರಿ ಮದುವೆ ಎಂಬ ಹೊರೆಯನ್ನು ಹೊರುವುದು ಎಲ್ಲರಿಗೂ ಸಾಧ್ಯವೇ? ಈ ಪ್ರಶ್ನೆಗೆ ಉತ್ತರ ರೂಪದಲ್ಲಿ ಕಡಿಮೆ ಖರ್ಚಿನಲ್ಲಿಯೇ ಕನಸಿಗೆ ರೆಕ್ಕೆ ಕಟ್ಟಿ ಹಾರುವ ವಿವಿಧ ದಾರಿಗಳು ತೆರೆದುಕೊಳ್ಳುತ್ತಿವೆ. ಅನಗತ್ಯ ಆಗುವ ಖರ್ಚುಗಳನ್ನು ಕಡಿಮೆ ಮಾಡಿ ಅದ್ದೂರಿತನಕ್ಕೆ, ಚೆಲುವಿಗೆ ಕೊರತೆ ಬಾರದಂತೆ ಮದುವೆಗಳು ಸೆಟ್ಟೇರುತ್ತಿವೆ. ಸಮಾಧಾನವಾಗಿ ಕೂತು ಮದುವೆಯ ರೂಪುರೇಷೆ ಪ್ಲ್ಯಾನ್ ಮಾಡಿಕೊಂಡರೆ ನಮ್ಮ ಆರ್ಥಿಕ ಮಿತಿಯಲ್ಲಿಯೇ ಬಂಧು ಬಾಂಧವರು ಅಹುದಹುದೆನ್ನುವ ಹಾಗೆ ಮದುವೆ ಸಮಾರಂಭ ರೂಪಿಸಲು ಸಾಧ್ಯ.

# ಕ್ಲಿಕ್ ಆಗೋ ಹಾಗೆ ಮದುವೆ ಆಗೋದು ಹೇಗೆ?